ಉಡುಪಿ ತಾಲ್ಲೂಕಿನಲ್ಲಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವ ಕುರಿತು

೧೨೭೭(೨೫೪೫) ಶ್ರೀ ವಸಂತ ವಿ. ಸಾಲಿಯಾನ (ಕುಂದಾಪುರ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಉಡುಪಿ ಹಾಗೂ ಕುಂದಾಪುರ ತಾಲ್ಲೂಕುಗಳಲ್ಲಿ ವಿದ್ಯುತ್ ಪಂಪುಸೆಟ್ಟುಗಳಿಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರಿಗೆ ಬಂದ ಬೇಡಿಕೆಯ ಅರ್ಜಿಗಳು ಎಷ್ಟು? (ಗ್ರಾಮವಾರು ವಿವರ ನೀಡುವುದು)

ಆ) ಇದನ್ನು ಪೂರೈಸಲು ಸರ್ಕಾರದವರು ಕೈಕೊಂಡ ಕ್ರಮಗಳೇನು?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ೧೯೮೭–೮೮ನೇ ಸಾಲಿನಲ್ಲಿ ಉಡುಪಿ ತಾಲ್ಲೂಕಿನಲ್ಲಿ ೭೮೧ ಅರ್ಜಿಗಳೂ ಕುಂದಾಪುರ ತಾಲ್ಲೂಕಿನಲ್ಲಿ ೬೭೬ ಅರ್ಜಿಗಳು ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಗಾಗಿ ನೋಂದಾಯಿಸಲ್ಪಟ್ಟವು. (ಗ್ರಾಮವಾರು ವಿವರ ಸಂಗ್ರಹಿಸಲಾಗುತ್ತಿದ್ದು ಇದನ್ನು ನಂತರ ನೀಡಲಾಗುತ್ತದೆ)

ಆ) ೧೯೮೭–೮೮ಕ್ಕೆ ಉಡುಪಿ ತಾಲ್ಲೂಕಿನಲ್ಲಿ ೭೩೦ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಸಿದ್ದು ೧೭೬ ಅರ್ಜಿದಾರರ ಕೆಲಸ ಪೂರ್ಣಗೊಂಡಿದ್ದು ಅವರು ವಿದ್ಯುತ್ ಪಡೆದಿರಲಿಲ್ಲ. ಇದೇ ರೀತಿ ಕುಂದಾಪುರ ತಾಲ್ಲೂಕಿನಲ್ಲಿ ೨೮೬ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಕೆಯಾಗಿದ್ದು ೬೨ ಅರ್ಜಿದಾರರ ಕೆಲಸ ಪೂರ್ಣಗೊಂಡಿದೆ. ಈ ಎರಡೂ ತಾಲ್ಲೂಕುಗಳಲ್ಲೂ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ.

ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲ್ಲೂಕಿನಲ್ಲಿ ಹಾದಿ ಹೋಗುತ್ತಿರುವ ತುಂಗಭದ್ರಾ ನದಿಗೆ ಬಿರ್ಲಾ ಕಾರ್ಖಾನೆಯ ಕೊಳಚೆ ನೀರಿನಿಂದ ಜನರ ಆರೋಗ್ಯಕ್ಕೆ ತೊಂದರೆಯಾಗುವುದು

೧೩೭೮ (೨೬೫೦) ಶ್ರೀ ಯಂಕಾನಾಯಕ್ (ಹರಪನಹಳ್ಳಿ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;—

ಅ) ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲ್ಲೂಕಿನಲ್ಲಿ ಹಾದು ಹೋಗುತ್ತಿರುವ ತುಂಗಭದ್ರಾ ನದಿ ನೀರಿಗೆ ಬಿರ್ಲಾ ಕಾರ್ಖಾನೆಯಿಂದ ಬಿಡುವ ರಾಸಾಯನಿಕ ಮಿಶ್ರಿತ ಕೊಳಚೆ ನೀರು ಸೇರಿ ಆದರಿಂದ ಜನರ ಹಾಗೂ ಜಾನುವಾರುಗಳ ಆರೋಗ್ಯಕ್ಕೆ ತೊಂದರೆಯಾಗಿ ಆತಂಕವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಆ ಪೈಕಿ ಸದರಿ ತಾಲ್ಲೂಕಿನ ಹಲವಾಗಲು, ನಿಟ್ಟೂರು, ತಾವರಗುಂದಿ, ಕಡಲೆ, ನಂದ್ಯಾಲ ಈ ಗ್ರಾಮಗಳಲ್ಲಿ ಈ ನದಿ ನೀರನ್ನು ಉಪಯೋಗಿಸಿ ಜನರು ಮತ್ತು ಜಾನುವಾರುಗಳ ಆರೋಗ್ಯಕ್ಕೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಶಾಶ್ವತವಾಗಿ ರಾಸಾಯನ ಮಿಶ್ರಿತ ಕೊಳಚೆ ನೀರನ್ನು ಬಿಡುವುದನ್ನು ತಡೆ ಗಟ್ಟಲು ಕಾರ್ಖಾನೆಯವರ ಮೇಲೆ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಜೆ. ಹೆಚ್. ಪಟೇಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ವಿದ್ಯುತ್ ಸಚಿವರು).—

ಅ) ಇಲ್ಲ.

ಆ) ಇಲ್ಲ,

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶಿವಮೊಗ್ಗ ತಾಲ್ಲೂಕು ಕಲ್ಲುಕೆಪ್ಪ ಸಂಸ್ಥೆಯ ಜಮೀನು

೧೩೭೯ (೨೬೬೮) ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;—

ಅ) ಶಿವಮೊಗ್ಗ ತಾಲ್ಲೂಕು ಕಲ್ಲುಕಿಪ್ಪ (ಕುರ್ಚಿ)ಸಂಸ್ಥೆ ಒಂದರಲ್ಲಿನ ಜಮೀನು ಅರಣ್ಯ ಇಲಾಖೆಯಿಂದ ಯಾವಾಗ ಬಿಡುಗಡೆಯಾಗಿರುತ್ತದೆ ? (ಅದರ ವಿಸ್ತೀರ್ಣದ ವಿವರ ನೀಡುವುದು)

ಆ) ಸಾಗುವಳಿಯಾಗುತ್ತಿರುವ ಭೂಮಿಯ ವಿಸ್ತೀರ್ಣವೆಷ್ಟು?

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಜಮೀನು ಬಿಡುಗಡೆ ಟಿಪ್ಪಣಿಯಲ್ಲಿ ಮಾಡಲಾಗಿದೆ ವಿಸ್ತೀರ್ಣ – ೪೮ ಎಕರೆ.

ಆ) ಸಾಗುವಳಿಯಾಗುತ್ತಿರುವ ವಿಸ್ತೀರ್ಣ ೪೧ ಎಕರೆ. (ಇಟ್ಟಿಗೆ ಹೆಕ್ಕೇರು)

ಶಿವಮೊಗ್ಗ ಜಿಲ್ಲೆಯ ಹೊಸನಗರ ಮತ್ತು ಸೊರಬ ತಾಲ್ಲೂಕುಗಳಿಗೆ ವಿದ್ಯುಚ್ಛಕ್ತಿ ಮಂಡಳಿಯ ಉಪಮಾರ್ಗವನ್ನು ವಿಂಜೂರಾತಿ ಮಾಡುವ ವಿಚಾರ

೧೨೬೧ (೨೩೦೮) ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ, ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಶಿವಮೊಗ್ಗ ಜಿಲ್ಲೆಯ ಹೊಸನಗರ ಮತ್ತು ಸೊರಬ ತಾಲ್ಲೂಕುಗಳಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಉಪ ಮಾರ್ಗವನ್ನು ವಿಂಜೂರಾತಿ ಮಾಡುವ ವಿಚಾರ ಸರ್ಕಾರದ ಮುಂದಿದೆಯೆ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಹೊಸನಗರದಲ್ಲಿ ಉಪವಿಭಾಗ ತೆಗೆಯುವುದನ್ನು ೧೯೮೬ರಲ್ಲಿ ಮಂಡಳಿಯು ಪರಿಶೀಲಿಸಿ ತಕ್ಕ ವರ್ಕ್‌ಲೋಡಿಲ್ಲದ್ದರಿಂದ ಪ್ರಸ್ತಾಪನೆಯನ್ನು ಮುಂದೂಡಲಾಯಿತು. ಸೊರಬದ ಬಗ್ಗೆ ಪರಿಶೀಲನೆ ನಡೆಸಬೇಕಾಗಿದೆ.

ಆ) ರಾಜ್ಯದಲ್ಲೆಲ್ಲಾ ವಿಭಾಗ, ಉಪವಿಭಾಗ, ಶಾಖೆಗಳ ಪುನರ್‌ರಚನೆಗೆ ಅಗತ್ಯ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಸದ್ಯದ ಮಂಡಳಿ ಆರ್ಥಿಕ ಸ್ಥಿತಿ ಸಾಮಾನ್ಯ ಪುನರ್‌ರಚನೆಗೆ ಅನುಕೂಲವಾಗಿಲ್ಲದಿರುವುದರಿಂದ ಕನಿಷ್ಠ ಅಗತ್ಯ ಪೂರೈಸುವ ಯೋಜನೆಯಿದೆ. ಪುನರ್‌ರಚನೆ ಮಾಡಿದಾಗ ಹೊಸನಗರ ಮತ್ತು ಸೊರಬಗಳಲ್ಲಿ ಉಪವಿಭಾಗ ತೆರೆಯುವ ವಿಷಯವನ್ನು ಪರಿಶೀಲಿಸಲಾಗುವುದು.

ಬೈಂದೂರಿನಲ್ಲಿ ವಿದ್ಯುತ್ ಸಬ್ ಸ್ಟೇಷನ್ ಸ್ಥಾಪಿಸುವುದು

೧೨೬೧ (೨೩೧೦) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಳೆದ ವರ್ಷವೇ ಸ್ಥಾಪಿಸಲಾಗುವುದೆಂದು ಆಶ್ವಾಸನೆ ನೀಡಲಾಗಿದ್ದ ಬೈಂದೂರಿನ ವಿದ್ಯುತ್ ಉಪ ವಿಭಾಗ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಆ) ಹಾಗಿದ್ದಲ್ಲಿ ಸದರಿ ಸ್ಥಾವರವನ್ನು ಸ್ಥಾಪಿಸುವುದು ಯಾವಾಗ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಮತ್ತು ಆ) ಮಂಡಳಿಯಲ್ಲಿ ವಿಭಾಗ, ಉಪ ವಿಭಾಗ, ಶಾಖೆಗಳ ಪುನರ್‌ರಚನೆಗೆ ಮಾಹಿತಿ ಸಂಗ್ರಹಿಸುತ್ತಿದೆ. ಹಾಲಿ ಆರ್ಥಿಕ ಸ್ಥಿತಿ, ಪುನರ್‌ರಚನೆಯ ಅಗತ್ಯಗಳನ್ನು ಗಣನೆಗೆ ತೆಗೆದುಕೊಂಡು ಪುನರ್‌ರಚನೆಯ ಪರಿಶೀಲನೆಯ ಸಂದರ್ಭದಲ್ಲಿ ಬೈಂದೂರಿನಲ್ಲಿ ಉಪ ವಿಭಾಗದ ರಚನೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಬೈಂದೂರಿಗೆ ಪ್ರತ್ಯೇಕ ಕೆ.ಇ.ಬಿ. ಸಬ್ ಡಿವಿಜನ್ ಸ್ಥಾಪನೆ ಕುರಿತು

೧೨೬೨ (೨೩೦೯) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—